ಹೋದರೆ ನಶಿಸಿ ಹೋಗುತ್ತವೆ. ಇರತಕ್ಕ ಸರ್ವೇ ನಂಬರ್ ಯಾವುದೂ ಇರುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಡೀ ರಾಜ್ಯದಲ್ಲಿ ದಾಖಲಾತಿ ಕ್ರಮಗಳನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಎಲ್ಲಿ ಈ ರೀತಿ ಆಗಿದೆ ಅಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿ

425 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು?*

ಆ) *ತಾಳೆ ಬೆಳೆ ಮತ್ತು ಸಂಸ್ಕರಣೆಯಲ್ಲಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು?*

ಇ) *ಈ ಬೆಳೆಯನ್ನು ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿಗಾಗಿ ಕೆಳಕಾಣಿಸಿದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:

1) ತಾಳೆಬೆಳೆ ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಸಹಾಯಧನ ನೀಡಲಾಗುತ್ತಿದೆ.
2) ರೈತರಿಗೆ ತಾಂತ್ರಿಕ ಮಾಹಿತಿ ಒದಗಿಸಲು ಭೀಮನಕೊಲ್ಲಿಯಲ್ಲಿ ಪ್ರಾತ್ಯಕ್ಷತಾ ಮುಂಚೂಣಿ ಕ್ಷೇತ್ರವನ್ನು ನಿರ್ಮಿಸಲಾಗಿದೆ.
3) ಉತ್ತಮ ತಾಳೆ ಸಸಿಗಳ ಉತ್ಪಾದನೆ ಮತ್ತು ವಿತರಣೆಗಾಗಿ ತಾರಕ ಬೀಜೋತ್ಪಾದನಾ ಕೇಂದ್ರ ಸ್ಥಾಪಿಸಲಾಗಿದೆ.
4) ತಾಳೆ ಹೆಣ್ಣಿನ ಸಂಸ್ಕರಣೆಗಾಗಿ 2 ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ.
5) ರೈತರ ತಾಳೆ ತಾಕಿನಲ್ಲಿ ಹನಿ ನೀರಾವರಿ ಅಳವಡಿಸಲು ಸಹಾಯಧನ ಒದಗಿಸಲಾಗುತ್ತಿದೆ.
6) ಬಂಜರು ಭೂಮಿಯಲ್ಲಿ ತಾಳೆ ಅಭಿವೃದ್ಧಿಗೆ ಯೋಜನೆ ಹಮ್ಮಿಕೊಳ್ಳಲಾಗಿದೆ.
7) ಡೀಸೆಲ್ ಪಂಪ್‌ಸೆಟ್‌ಗಳನ್ನು ಅಳವಡಿಸಲು ರೈತರಿಗೆ ಶೇಕಡ 50 ಸಹಾಯಧನ ಒದಗಿಸಲಾಗುತ್ತದೆ.

ಈ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಮತ್ತು ಖಾಸಗಿ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಬಂದಿದೆ.

ತಾಳೆ ಬೆಳೆ ಸಂಸ್ಕರಣೆಯಲ್ಲಿರುವ ಸಮಸ್ಯೆಗಳ ಪರಿಹಾರಕ್ಕೆ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಆಮದು ಸುಂಕದ ಇಳಿಕೆಯಿಂದ ತಾಳೆಬೆಳೆ ಕುಸಿಯಿತು. ಆಮದು ಸುಂಕವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

2) ರೈತರಿಂದ ತಾಳೆ ಹಣ್ಣಿನ ಪ್ರಮಾಣ ನಿರೀಕ್ಷಿಸಿ ಕಾರೆಹಳ್ಳಿಯಲ್ಲಿರುವ ಸಂಸ್ಕರಣಾ ಘಟಕದ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ.

3) ರೈತರು ಬೆಳೆದ ತಾಳೆ ಬೆಳೆಗೆ ಸೂಕ್ತ ಬೆಲೆ ದೊರೆಯದಿದ್ದಾಗ ಬೆಂಬಲ ಬೆಲೆ ನೀಡಲಾಗಿದೆ.

4) ತಾಳೆ ಬೆಳೆ ಅಭಿವೃದ್ಧಿಯ ಹಿತದೃಷ್ಟಿಯಿಂದ ತಾಳೆ ಬೆಳೆ ಕಾಯ್ದೆಯನ್ನು ಈಗಾಗಲೇ ವಿಧಾನಸಭೆಯಲ್ಲಿ ಚರ್ಚಿಸಿ ಅಂಗೀಕರಿಸಿದ್ದು, ವಿಧಾನಪರಿಷತ್ತಿನಲ್ಲಿ ಚರ್ಚಿಸಿ ಕ್ರಮಕ್ಕೆಗೊಳ್ಳಲು ಮಂಡಿಸಿದೆ.

ಇ) ಈ ಬೆಳೆಯನ್ನು ಮೈಸೂರು ಹೊಸಪೇಟೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ರಾಜ್ಯದ ತಾಳೆ ಬೆಳೆ ಹಾಗೂ ತಾಳೆ ಎಣ್ಣೆ ಅಭಿವೃದ್ಧಿಗಾಗಿ ಏನೇನು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರ ಹೇಳಿರುವಂತೆ, ಏಳು ಯೋಜನೆಗಳನ್ನು ಈಗಾಗಲೇ ಹಮ್ಮಿಕೊಂಡಿದ್ದಾರೆ. ಆ ಏಳು ಯೋಜನೆಗಳನ್ನು ವಿಸ್ತಾರ ಮಾಡತಕ್ಕಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣವನ್ನು ವಿಸ್ತಾರ ಮಾಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ. ಅದರ ಪರಿಣಾಮವಾಗಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆಯನ್ನು ಬೆಳೆಯಲಾಗಿದೆ? ಇತ್ತೀಚೆಗೆ ತಾಳೆ ಬೆಳೆಯನ್ನು ರೈತರು ಕಿತ್ತು ಹಾಕುತ್ತಿದ್ದಾರೆ. ಎಷ್ಟು ಎಕರೆ ಪ್ರದೇಶದಲ್ಲಿ ಇದನ್ನು ನಾಶ ಮಾಡಿದ್ದಾರೆ?

ಶ್ರೀ ಅಲ್ಲಂ ವೀರಭದ್ರಪ್ಪ : ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ ಮೊಟ್ಟಮೊದಲ ಬಾರಿಗೆ ನಾವು ಶಿವಮೊಗ್ಗ ಜಿಲ್ಲೆಯಲ್ಲಿ 1,115 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದೆವು, ಕಾಲಕ್ರಮೇಣ ಒಟ್ಟಾರೆ ಇಡೀ ರಾಜ್ಯದಲ್ಲಿ 8250 ಹೆಕ್ಟೇರ್ ಪ್ರದೇಶದಲ್ಲಿ ನಾವು ಇವತ್ತು ತಾಳೆ ಬೆಳೆಯುವುದಕ್ಕೆ ಆ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಇದು ಕೇಂದ್ರ ಸರ್ಕಾರದ ಯೋಜನೆ. ಕೇಂದ್ರ ಸರ್ಕಾರದಿಂದ ಸಬ್ಸಿಡಿ ಸಿಗುತ್ತದೆ. ಕೇಂದ್ರ ಸರ್ಕಾರ ಇದಕ್ಕೆ ಬಹಳಷ್ಟು ಮಹತ್ವ ಕೊಟ್ಟಿದೆ. ಎಲ್ಲಾ ಎಣ್ಣೆ ಬೆಳೆಗಳಿಗಿಂತ ಇದರಲ್ಲಿ ಸುಮಾರು ಶೇಕಡ 60 ರಷ್ಟು ಎಣ್ಣೆ ಪ್ರಮಾಣ ಇದೆ. ಕಡಲೆಕಾಯಿಯಲ್ಲಿ 20 ಪರ್ಸೆಂಟ್ ಇದ್ದರೆ, ಸೂರ್ಯಪಾನದಲ್ಲಿ 25 ಪರ್ಸೆಂಟ್ ಇದೆ. ಇದರಲ್ಲಿ 60

ಪರ್ಸೆಂಟ್ ಇರುವುದರಿಂದ ನಾವು ಎಣ್ಣೆ ತಯಾರಿಕೆಯಲ್ಲಿ ಸ್ವಾವಲಂಬಿಗಳಾಗಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ 175 ಪರ್ಸೆಂಟ್ ಇಂಪೋರ್ಟ್ ಡ್ಯೂಟಿ ಇತ್ತು, ಇಂಪೋರ್ಟ್ ಡ್ಯೂಟಿ ಕಾಲಕ್ರಮೇಣ 3,219ರವರೆಗೆ ಇಳಿದಿದ್ದರಿಂದ ರೈತರು ಕಂಗಾಲಾದರು. ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದಾದರೂ ಬೆಳೆ ಬೆಳೆದಿದ್ದರೆ ಅವರು ಅಡಿಕೆ ಬೆಳೆ ನೋಡುತ್ತಾರೆ, ಇದರಿಂದ ಲಾಭ ಬರುತ್ತದೆಯೇ ಅಥವಾ ಅದು ನಷ್ಟವಾಗುತ್ತದೆಯೇ ಎಂದು ಹೇಳುತ್ತಾರೆ. ಆದುದರಿಂದ ಬಹಳಷ್ಟು ಜನ ತಾಳೆ ಬೆಳೆಯನ್ನು ಬೆಳೆದು ಅದಕ್ಕೆ ಯೋಗ್ಯ ಬೆಲೆ ಸಿಗದೆ ಇದ್ದ ಕಾರಣದಿಂದ ಬೆಳೆಯನ್ನು ಕಿತ್ತು ಹಾಕಿದರು. ನಾವು ಕೇಂದ್ರ ಸರ್ಕಾರದ ಜೊತೆ ಹೋರಾಡಿ ಮಿನಿಮಮ್ ಸಪೋರ್ಟ್ ಪ್ರೈಸ್ 2,750 ರೂಪಾಯಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ವರ್ಷ ಯಾರಾದರೂ, ವೇಸ್ಟ್ ಲ್ಯಾಂಡ್ ಹೊಂದಿದ್ದರೆ ಅವರಿಗೆ ಆ ಭೂಮಿಯನ್ನು ಡೆವಲಪ್ ಮಾಡುವುದಕ್ಕೆ ಸಬ್ಸಿಡಿ ಕೊಡುವುದಕ್ಕೆ ನಾವು ತಯಾರಿದ್ದೇವೆ. ತಾಳೆ ಬೆಳೆ ಬೆಳೆಯುವುದಕ್ಕೆ ಹಾಗೂ ಲ್ಯಾಂಡ್ ಡೆವಲಪ್ ಮಾಡುವುದಕ್ಕೆ ಕೇಂದ್ರ ಸರ್ಕಾರದಮತಿಯಿಂದ ಸಬ್ಸಿಡಿ ಇದೆ. ಯಾರಾದರೂ ಐದು ಹೆಕ್ಟೇರ್ ಮೇಲೆ ಭೂಮಿ ಹೊಂದಿದ್ದರೆ ಅಂತಹವರಿಗೆ 50 ಪರ್ಸೆಂಟ್ ಡೀಸಲ್ ಪಂಪ್‌ಸೆಟ್ ಕೊಡುವುದಕ್ಕೆ ಅವಕಾಶ ಇದೆ. ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದವರು ಕೇವಲ 25 ಪರ್ಸೆಂಟ್ ಇಂಪೋರ್ಟ್ ಡ್ಯೂಟಿ ಹಾಕಿರುವುದಕ್ಕೋಸ್ಕರ ಎಣ್ಣೆ ಬೆಲೆಯಲ್ಲಿ ಬಹಳಷ್ಟು ಕಡಿಮೆಯಾಗಿದೆ. ಇದರಿಂದಾಗಿ ಹೆಚ್ಚಿನ ಮಹತ್ವ ಇಲ್ಲದ ಹಾಗಾಗಿದೆ. ಕೇಂದ್ರ ಸರ್ಕಾರದವರು ಇಂಪೋರ್ಟ್ ಪಾಲಿಸಿ ಬದಲಾವಣೆ ಮಾಡಿ ಇದಕ್ಕೆ ಹೆಚ್ಚಿಗೆ ಹಾಕಿದರೆ ನಮ್ಮ ರೈತರು ಬೆಳೆದ ಎಣ್ಣೆ ಕಾಳಿಗೆ ಹೆಚ್ಚು ಬೆಲೆ ಸಿಗುತ್ತದೆಯೇ ಎಂದು ಕೇಳಿದರೆ ಅವರಿಂದ ನಮಗೆ ಸರಿಯಾದ ಉತ್ತರ ಸಿಗಲಿಲ್ಲ, ಬಹಳಷ್ಟು ಸಾರಿ ನಾವು ಕೇಂದ್ರ ವಾಣಿಜ್ಯ ಸಚಿವರಿಗೆ ಹಾಗೂ ಕೃಷಿ ಸಚಿವರಿಗೆ ಭೇಟಿ ಮಾಡಿದ್ದೇವೆ. ಅವರು ಮಿನಿಮಮ್ ಸಪೋರ್ಟ್ ಪ್ರೈಸ್ ಕೊಟ್ಟಿದ್ದಾರೆ. ಇದರಿಂದ ರೈತರು ಸರ್ವೈವಲ್ ಆಗಿದ್ದಾರೆ. ತಾಳೆ ಬೆಳೆ ಕಿತ್ತು ಹಾಕುವುದಕ್ಕೆ ಅವರು ಹೋಗುತ್ತಿಲ್ಲ. ಕಳೆದ ಒಂದು ವರ್ಷದಿಂದ ಬೆಳೆ ಕಿತ್ತು ಹಾಕುವುದನ್ನು ನಿಲ್ಲಿಸಿದ್ದಾರೆ. ಈ ವರ್ಷ ಕೂಡ ಸಾವಿರ ಎಕರೆಯಷ್ಟು ಜಮೀನನ್ನು ಡೆವಲಪ್ ಮಾಡಬೇಕೆಂದು ನಮ್ಮ ಯೋಜನೆ ಇದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಇದರ ವಿಚಾರದಲ್ಲಿ ವಿಸ್ತಾರ ಮಾಡದೆ, ಇರುವಂತಹ ಕ್ಷೇತ್ರವನ್ನು ಉಳಿಸಿದರೆ ಸಾಕು. ಎಂಟು ವರ್ಷ, 10 ವರ್ಷ ಬೆಳೆಸಿ ಅದನ್ನು, ಒಂದೊಂದು ಗಿಡ ಕೀಳುವುದಕ್ಕೆ 2 ರಿಂದ ಮೂರು ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ಎಂಟು - ಹತ್ತು ವರ್ಷ ಆದಾಯ ಕಳೆದು ಕೊಂಡು ಅದನ್ನು ಕಿತ್ತು ಹಾಕುತ್ತಿದ್ದಾರೆ. ಸಾವಿರಾರು ಎಕರೆಯಲ್ಲಿ ತಾಳೆ ಗಿಡಗಳನ್ನು ಕಿತ್ತು ಎಸೆಯುತ್ತಿದ್ದಾರೆ. ಇದಕ್ಕೆ ಕಾರಣ ಆಮದು ಸುಂಕದ ಪ್ರಶ್ನೆ, ಇನ್ನೊಂದು ವಿಚಾರವೆಂದರೆ ಹಾರೇಹಳ್ಳಿಯಲ್ಲಿ ಪ್ರಾರಂಭ ಮಾಡಿರುವ ಸಂಸ್ಕರಣ ಘಟಕ ಏನಿದೆ ಇದನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದ ಪಾಲೂ ಸಹ ಅದರಲ್ಲಿ ಇದೆ. ಆದರೆ ನಿಮ್ಮ ನಿಯಂತ್ರಣ ಏನೂ ಇಲ್ಲ. ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಆಗಿನ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯ ಮಂತ್ರಿಗಳು ಕರೆದ ಸಭೆಗೆ ಅವರು ಒಬ್ಬ ಗುಮಾಸ್ತರನ್ನು ಕಳುಹಿಸಿದ್ದರು. ಹಾಗದರೆ ಅಲ್ಲಿ ನಿಮ್ಮ

ನಿಯಂತ್ರಣ ಏನಿದೆ? ಭದ್ರಾವತಿಯ ತಾಳೆ ಬೆಳೆ ಸಂಸ್ಕರಣ ಘಟಕದಿಂದ ರೈತರಿಗೆ ಕೊಡುವ ಬಾಕಿ ಸಾಕಷ್ಟು ಇದೆ. ತಾಳೆ ಹಣ್ಣುಗಳನ್ನು ಅವರು ಪರ್ಚೆಸ್ ಮಾಡುತ್ತಿಲ್ಲ. ರೈತರು ಬೆಳೆದ ತಾಳೆ ಹಣ್ಣು ಅಲ್ಲಿಯೇ ಜಮೀನಿನಲ್ಲಿ ಕೊಳೆತು ಹೋಗುತ್ತಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದ ನೆರವು ಯಾವರೀತಿ ಕೊಡುತ್ತೀರಿ? ಕೇಂದ್ರ ಸರ್ಕಾರ ಮಾರುಕಟ್ಟೆ ಸಬ್ಸಿಡಿ ಕೊಡುತ್ತಿದೆ, ಬೆಂಬಲ ಬೆಲೆ ಕೊಡುತ್ತಿದೆ ಎಂದು ತಾವು ಉಲ್ಲೇಖ ಮಾಡಿದ್ದೀರಿ. ಅದನ್ನು ಉಪಯೋಗಿಸಿಕೊಂಡು ಆ ಫ್ಯಾಕ್ಟರಿ ನಿಯಂತ್ರಣ ಮಾಡಿ ರೈತರಿಗೆ ಸಹಾಯ ಮಾಡುವ ಬಗ್ಗೆ ತಮ್ಮ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡಿದೆ?

ಶ್ರೀ ಅಲ್ಲಂ ವೀರಭದ್ರಪ್ಪ : ರೈತರು ಎಂಟು ವರ್ಷ ತಾಳೆ ಬೆಳೆಸಿ ಅದಕ್ಕೆ ಸರಿಯಾದ ಬೆಲೆ ಸಿಗದೆ ಇರುವುದರಿಂದ ಬಹಳ ನಷ್ಟ ಅನುಭವಿಸುತ್ತಿದ್ದಾರೆ. ಆ ಪರಿಸ್ಥಿತಿ ಶಿವಮೊಗ್ಗ ಜಿಲ್ಲೆಯ ರೈತರಲ್ಲಿ ಇದೆ. ನಮ್ಮ ಸರ್ಕಾರ ಬಂದಮೇಲೆ, ಓಸ್ವಾಲ್ ಕಂಪನಿ ಏನಿತ್ತು ಅವರು ಹೇಳದೆ ಕೇಳದೆ 40 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡದೆ ಓಡಿ ಹೋಗಿದ್ದರು. ಅದರಲ್ಲಿ ಸುಮಾರು 20 ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. 16 ಲಕ್ಷ ರೂಪಾಯಿಗಳು ಬಾಕಿ ಇದೆ. ಅವರು ಬೆಳೆಯನ್ನು ತೆಗೆದು ಬಿಟ್ಟಿದ್ದಾರೆ. ನಮ್ಮ ಉದ್ದೇಶ ಏನಿತ್ತು? ಯಾರ್ಯಾರು ತಾಳೆ ಬೆಳೆ ಬೆಳೆಯುತ್ತಾರೆ ಅವರಿಗೆ ಸಬ್ಸಿಡಿ ಕೊಡುವ ಉದ್ದೇಶದಿಂದ ನಾವು 16 ಲಕ್ಷ ರೂಪಾಯಿಗಳನ್ನು ಬಾಕಿ ಇಟ್ಟಿದ್ದೇವೆ. ಯಾರ್ಯಾರು ತಾಳೆ ಬೆಳೆ, ಹಣ್ಣುಗಳನ್ನು ಮಾರಿದ್ದರು ಅವರಿಗೆ ಹಣ ಕೊಟಿದ್ದೇವೆ. ಓಸ್ವಾಲ್ ಕಂಪನಿಯವರು ಇಲ್ಲದೇ ಇರುವುದರಿಂದ, ಆಂಧ್ರದ ಒಬ್ಬ ಖಾಸಗಿ ಎಂಟರ್‌ಪ್ರೈಸಸ್‌ನವರನ್ನು ರಿಕ್ವೆಸ್ಟ್ ಮಾಡಿದ ಮೇಲೆ ರೈತರು ಬೆಳೆದ ಹಣ್ಣು ಏನಿದೆ ಅದನ್ನು ಪ್ರತಿ ದಿವಸ ಅವರು ಪ್ರೊಕ್ಯೂರ್ ಮಾಡುತ್ತಿದ್ದಾರೆ. ಯಾವ ಸಂದರ್ಭದಲ್ಲಿ ಕೂಡ ಇವತ್ತು ತಾಳೆ ಹಣ್ಣು ತೆಗೆಯುವ ಪ್ರಶ್ನೆ ಇಲ್ಲ. ನಾವು ಹಣ್ಣು ಖರೀದಿ ಮಾಡುತ್ತಿದ್ದೇವೆ. ರೈತರು ಮೊದಲಿಗಿಂತ ಈಗ ಸಂತೋಷವಾಗಿದ್ದಾರೆ. ನಮ್ಮ ಸರ್ಕಾರ ಪ್ರತಿ ಟನ್‌ಗೆ 250 ರೂಪಾಯಿಗಳ ಸಬ್ಸಿಡಿ ಕೊಟ್ಟು ಆ ರೈತರನ್ನು ಉಳಿಸಬೇಕೆನ್ನುವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಈ ವ್ಯವಸ್ಥೆ ಮಾಡಿದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದಹಾಗೆ ಶಿವಮೊಗ್ಗ ತಾಲ್ಲೂಕಿನಲ್ಲಿ ಹೆಚ್ಚು ಬೆಳೆ ಬೆಳೆದಿದ್ದರಿಂದ ಸಬ್ಸಿಡಿ ಕೊಟ್ಟರು. ಕೊಡತಕ್ಕಂತಹ ಹಣವನ್ನು ಯಾವ ರೀತಿ ತೀರಿಸಬೇಕೆಂದು ರೈತರಿಗೆ ಕಷ್ಟವಾಗಿದೆ. ಅಲ್ಲಿ ತೆಗೆದು ಕೊಂಡಿರತಕ್ಕಂತಹ ಹಣ್ಣುಗಳಿಗೆ ಅವರು ಯಾವ ಸಮಯದಲ್ಲಿ ದುಡ್ಡು ಕೊಡುತ್ತಾರೆಂದು ಗೊತ್ತಾಗುವುದಿಲ್ಲ. ಮೊನ್ನೆ ನಾನು ತೋಟಗಾರಿಕೆ ಇಲಾಖೆಗೆ ಹೋದಾಗ ಎಲ್ಲಾ ಹಣ್ಣು ಶೇಖರಣೆ ಮಾಡಿದ್ದರು. ಅಲ್ಲಿ ಸೂಕ್ತ ಬೆಲೆ ಸಿಗದೆ ರೈತರು ಕಂಗಾಲಾಗಿದ್ದಾರೆ. ಬಹಳ ಕ್ಷೀಣ ಪರಿಸ್ಥಿತಿಯಾಗಿದೆ. 20 ಲಕ್ಷ ರೂಪಾಯಿಗಳ ಹಣ ಇನ್ನು ಬಂದಿಲ್ಲ. ತಾಳೆ ಬೆಳೆಯ ಗಿಡ ತೆಗೆಯುವುದಕ್ಕೂ ತೊಂದರೆಯಾಗಿದೆ, ಬೇರೆ ಗಿಡ ಹಾಕುವುದಕ್ಕೂ ತೊಂದರೆಯಾಗಿದೆ. ಯಾರೂ ಅದನ್ನು ಕೇಳುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಕಡೆಗೆ ಪೂರ್ಣ ಗಮನಹರಿಸಿ ತಾವೇ ಅಲ್ಲಿಗೆ ಖುದ್ದಾಗಿ ಬಂದರೆ ರೈತರ ಪೂರ್ಣ ಪರಿಪಾಡು ಪರಿಸ್ಥಿತಿ ಅವರಿಗೆ ಗೊತ್ತಾಗುತ್ತದೆ. ಸುಮ್ಮನೆ ನಾವಿಲ್ಲಿ ಅದನ್ನು ಹೇಳಿದರೆ ಅವರಿಗೆ ಗೊತ್ತಾಗುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, 20 ಲಕ್ಷ ರೂಪಾಯಿಗಳ ಹಳೆಯ ಬಾಕಿಯನ್ನು ನಾವು ಡಿ.ಸಿ. ಮೂಲಕ ಕೊಟ್ಟಿದ್ದೇವೆ. ಹೊಸದಾಗಿ ಅಲ್ಟರ್ನೇಟ್ ಅರೇಂಜ್‌ಮೆಂಟ್ ಮಾಡುವುದಕ್ಕೆ ತಿಮ್ಮಾಪುರಿ ಏಜೆನ್ಸಿ ಜೊತೆಗೆ ಆಗ್ರಿಮೆಂಟ್ ಮಾಡಿ ಕಾರ್ಯದರ್ಶಿಯವರು ಮತ್ತು ನಾನು ಸೈನ್ ಮಾಡಿದ್ದೇವೆ. ಅನ್-ಅಫಿಷಿಯಲ್ಲಾಗಿ ಪ್ರೊಕ್ಯೂರ್‌ಮೆಂಟ್ ಮಾಡುತ್ತಿದ್ದರು. ನೀವು ಆಗ್ರಿಮೆಂಟ್ ಸರಿಯಾಗಿ ಕೊಡದೇ ಇದ್ದರೆ ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು. ನಾವು ಅವರಿಗೆ ಆಗ್ರಿಮೆಂಟ್ ಕೂಡ ಕೊಟ್ಟಿದ್ದೇವೆ. ನಾವು ಪ್ರತಿ ವಾರ ರಿಪೋರ್ಟ್ ತರಿಸುತ್ತಿದ್ದೇವೆ. ಎಲ್ಲವನ್ನು ಪ್ರೊಕ್ಯೂರ್‌ಮೆಂಟ್ ಮಾಡುತ್ತಿದ್ದಾರೆ. ಇನ್ನು ಏನಾದರೂ ಸಮಸ್ಯೆ ಇದ್ದರೆ ಅದನ್ನು ಬಗೆಹರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ತಾಳೆ ಬೆಳೆ ಈ ರಾಜ್ಯಕ್ಕೆ ಬಂದಮೇಲೆ ಅನೇಕ ರೈತರು ಇವತ್ತು ಪಾಪರ್ ಆಗಿದ್ದಾರೆ. ಕೇಂದ್ರ ಸರ್ಕಾರ ಹಣ ಕೊಡುತ್ತದೆ ಎಂದು ಕೆಲವು ಖಾಸಗಿ ಸಂಸ್ಥೆಗಳನ್ನು ಹುಟ್ಟು ಹಾಕಿಕೊಂಡು ಅವರ ಮುಖಾಂತರ ಹಣ ಕೊಟ್ಟು, ಸಂಸ್ಕರಣ ಘಟಕಗಳನ್ನು ಮಾಡಿ ರೈತರಿಗೆ ಅವಕಾಶ ತೋರಿಸಿ ಇವತ್ತು ರೈತರು ಎಲ್ಲರೂ ಪಾತಾಳಕ್ಕೆ ಹೋಗಿದ್ದಾರೆ. ಅವರು ಬೆಳೆದ ಬೆಳೆಗೆ ಸರಿಯಾದ ದರ ಸಿಗುತ್ತಿಲ್ಲ.

11.30 ಎ.ಎಂ

ಈಗ ತಾಳೆ ಬೆಳೆಗೆ ಇರುವ ಬೆಂಬಲ ಬೆಲೆ ಬಹಳ ಕಡಿಮೆ ಇರುವುದರಿಂದ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಇಂದು ಬೆಂಬಲ ಬೆಲೆಯನ್ನು ಸಹಾಯಧನದ ಮೂಲಕ ಹೆಚ್ಚಿಸದೆ ರೈತರಿಗೆ ಪರಿಹಾರ ಸಿಗುತ್ತಿಲ್ಲವಾದ್ದರಿಂದ ತಾಳೆ ಬೆಳೆ ಬೆಳೆದಂಥ ರೈತರು ಕಂಗಾಲಾಗಿ, ದಿವಾಳಿಯಾಗುತ್ತಿದ್ದಾರೆ. ಆ ಗಿಡಗಳನ್ನು ತೆಗೆಯುವುದಕ್ಕೋಸ್ಕರ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಬುಲ್‌ಡೋಜರ್ ತರಿಸಬೇಕಾದ ಪರಿಸ್ಥಿತಿ ಬಂದಿದೆ! ಕೇಂದ್ರ ಸರ್ಕಾರದ ಅಮದು ಸುಂಕದ ನೀತಿಯಿಂದ ರೈತರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದಾಗ ಅದೇ ಕಾರಣದಿಂದ ರಾಜ್ಯ ಸರ್ಕಾರ ಸುಮ್ಮನೇ ಕೂರುವುದಕ್ಕೆ ಆಗುವುದಿಲ್ಲ. ರಾಜ್ಯ ಸರ್ಕಾರ ಈ ರೈತರಿಗೋಸ್ಕರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ? ಮತ್ತು ತಾಳೆ ಬೆಳೆ ಬೆಳೆದ ರೈತರಿಗೆ ಬೆಲೆ ಕುಸಿತದಿಂದಾಗಿರುವ ಹೆಚ್ಚುವರಿ ನಷ್ಟವನ್ನು ಭರಿಸುವುದಕ್ಕೆ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಸದನಕ್ಕೆ ಬಂದಿರುವ ಬಹುತೇಕ ಸದಸ್ಯರುಗಳು ರೈತ ಕುಟುಂಬದಿಂದ ಬಂದಿರತಕ್ಕಂಥವರೇ ಎಂಬುದು ಎಲ್ಲರಿಗೂ ಗೊತ್ತಿದೆ. ಈಡೀ ಭಾರತ ದೇಶದಲ್ಲಿಯೇ ಕಳೆದ ಐದು ವರ್ಷಗಳಿಂದ ಬೆಳೆದಿರುವ ಬೆಳೆಗಳಿಗೆ ಸ್ಟೇಬಲ್ ಪ್ರೈಸ್ ಸಿಕ್ಕಿಯೇ ಇಲ್ಲ. ಕೃಷಿ ಬೆಳೆಗಳ ಬೆಲೆಗಳು ಅರ್ಧಕ್ಕೆ ಅರ್ಧ ಇಳಿದು ಬಿಟ್ಟಿದೆ. ಕಬ್ಬು ಬೆಳೆದ ರೈತರಿಗೆ ಹತ್ತು ವರ್ಷಗಳಿಂದಲೂ ಹಣ ಸಿಗದ ಸಂದರ್ಭಗಳೂ ಇವೆ. ಇಂದು ಭತ್ತದ ಬೆಲೆ ಕೂಡ ಕಡಿಮೆಯಾಗಿರುವುದಕ್ಕೆ ರೈತರಿಂದ ಸ್ಟ್ರೈಕ್ ನಡೆಯುತ್ತಿದೆ. ಒಂದು ತೆಂಗಿನಕಾಯಿ ಬೆಲೆ 5 ರೂಪಾಯಿಗಳು ಇದ್ದದ್ದು ಇಂದು ಒಂದು ರೂಪಾಯಿ,

ಎರಡು ರೂಪಾಯಿಗಳಿಗೆ ಇಳಿದಿದೆ. ಹೀಗಿರುವಾಗ ಕೇಂದ್ರ ಸರ್ಕಾರ ಮತ್ತು ನಾವು ತಾಳೆ ಬೆಳೆ ಬೆಲೆ ಬಗ್ಗೆ ಮಿನಿಮಮ್ ಸಪೋರ್ಟ್ ಪ್ರೈಸ್ 2750 ಎಂದು ನಿಗದಿ ಮಾಡಿ ಈ ಬೆಳೆಯನ್ನು ರೈತರು ಎಷ್ಟಾದರೂ ಬೆಳೆಯಲಿ, ಯಾವ ವರ್ಷದಲ್ಲಾದರೂ ಬೆಳೆಯಲಿ ನಾವು ಅದನ್ನು ಖರೀದಿ ಮಾಡುತ್ತೇವೆ ಎಂದು ಹೇಳಿರುವುದರಿಂದ ಬೇರೆ ಬೇರೆ ಬೆಳೆ ಬೆಳೆಯುವ ರೈತರುಗಳಿಗೆ ಹೋಲಿಸಿದರೆ ತಾಳೆ ಬೆಳೆ ಬೆಳೆಯುವ ರೈತರು ಸಾವಿರ ಪಾಲು ಮೇಲು ಎಂಬುದನ್ನು ಎಲ್ಲರೂ ತಿಳಿಯಬೇಕು.

ಶ್ರೀ ಎಸ್.ಹೆಚ್. ಪುಟ್ಟ ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಾಳೆ ಹಣ್ಣನ್ನು ಕ್ರಶ್ ಮಾಡುವುದಕ್ಕೆ ಎಷ್ಟು ಕೇಂದ್ರಗಳನ್ನು ತೆಗೆದಿದ್ದಾರೆ ಎಂಬ ಬಗ್ಗೆ ಹೇಳಬೇಕು ಇದಲ್ಲದೆ ಕಳೆದ ವರ್ಷ ಹಾಸನದಲ್ಲಿ ತಾಳೆ ಹಣ್ಣನ್ನು ಖರೀದಿ ಮಾಡದೇ ರೈತರಿಗೆ ತುಂಬಾ ನಷ್ಟವಾಗಿ ಅವರು ಸಂಕಷ್ಟಗಳನ್ನು ಎದುರಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಗ್ಗೆ ಕೂಡ ಅವರು ಹೇಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಮಟ್ಟಿಗೆ ಶಿವಮೊಗ್ಗ ಜಿಲ್ಲೆಯ ರೈತರಿಂದ ಇಂಥ ಸಮಸ್ಯೆಗಳ ಬಗ್ಗೆ ದೂರುಬಂದಿತ್ತೇ ವಿನಃ ಹಾಸನ ಜಿಲ್ಲೆಯ ರೈತರಿಂದ ಬಂದಿರಲಿಲ್ಲ. ಹಾಗೇನಾದರೂ ಇದ್ದರೆ ಮಾನ್ಯ ಸದಸ್ಯರು ಅದರ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಆದರ ಬಗ್ಗೆ ವಿವರವಾಗಿ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಹಾಸನ ಮತ್ತು ಮೈಸೂರು ಜಿಲ್ಲೆಗಳಿಗೆ ಕಬಿನಿಯಲ್ಲಿ ಒಂದು ಪ್ರೋಸೆಸಿಂಗ್ ಯೂನಿಟ್ ಇದೆ, ಅದು ರನ್ ಆಗುತ್ತಿದೆ. ಇದರ ಬಗ್ಗೆ ಯಾವುದಾದರೂ ರೈತರಿಂದ ದೂರು ಬಂದಿದ್ದರೆ, ಅದನ್ನು ನನಗೆ ಕಳುಹಿಸಿದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದಾರೆ. ಅವರು ವಸ್ತು ಸ್ಥಿತಿಯನ್ನು ನೋಡಿದಹಾಗೆ ಕಾಣಿಸುತ್ತಿಲ್ಲ. ಹಿಂದಿನ ಸರ್ಕಾರದವರು ಕೂಡ ಈ ಬಗ್ಗೆ ಸರಿಯಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಹೋಗಲಿಲ್ಲ. ಓಸ್ವಾಲ್ ಕಂಪನಿಯವರು ನನ್ನ ಕ್ಷೇತ್ರದಲ್ಲಿ ತಾಳೆ ಹಣ್ಣುಗಳನ್ನು ಖರೀದಿ ಮಾಡದಿರುವುದರಿಂದ ಹಣ್ಣನ್ನು ಕಾಗೆ, ನಾಯಿಗಳು ತಿನ್ನುತ್ತಿರುವುದರಿಂದ ರೈತರಿಗೆ ಬಹಳ ನಷ್ಟವಾಗುತ್ತಿದೆ. ತಾಳೆ ಹಣ್ಣನ್ನು ಖರೀದಿ ಮಾಡಲು ಖರೀದಿ ಸೆಂಟರ್‌ಗಳನ್ನೇನು ಇಟ್ಟಿದ್ದಾರೆ ಅದು ಸರಿಯಿಲ್ಲ ಮತ್ತು ಖರೀದಿ ಮಾಡಿರುವುದಕ್ಕೆ ರೈತರಿಗೆ ಹಣವನ್ನು ಕೂಡ ಸರಿಯಾಗಿ ಪೇಮೆಂಟ್ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದು 20 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ನಿಜ. ಆದರೆ ಇನ್ನೂ ಬಾಕಿ ಹಣ ಕೊಡಬೇಕಾದುದು ಇದೆ. ಆದುದರಿಂದ ಮಾನ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಯ ಎಲ್ಲಾ ಶಾಸಕರ ಸಭೆಯನ್ನು ಕರೆದು ಚರ್ಚೆ ಮಾಡಿ, ಪರಿಶೀಲನೆ ಮಾಡಿ ತಾಳೆ ಹಣ್ಣನ್ನು ಸಕಾಲದಲ್ಲಿ ಖರೀದಿ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಅದನ್ನು ಸಕಾಲದಲ್ಲಿ ಖರೀದಿ ಮಾಡದಿದ್ದರೆ. ಅದರಲ್ಲಿಯ ಎಣ್ಣೆಯ ಪ್ರಮಾಣ ಕೂಡ ಇಳಿದು ಹೋಗುತ್ತದೆ. ಸಕಾಲದಲ್ಲಿ ಕೊಳ್ಳದಿದ್ದರೆ ರೈತ ತಾಳೆಯನ್ನು ಕೊಯ್ಯುವುದಕ್ಕೆ ಬೇಕಾದ ಹಣ ಕೂಡ ಸಿಗದ ಪರಿಸ್ಥಿತಿ ಬರುತ್ತದೆ. ಆದಕಾರಣ

ಹಣ್ಣನ್ನು ಸಕಾಲದಲ್ಲಿ ಖರೀದಿ ಮಾಡಲು ಮತ್ತು ಬಾಕಿ ಹಣವನ್ನು ಕೊಡಲು ವ್ಯವಸ್ಥೆ ಮಾಡುತ್ತಾರೆಯೇ? ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ರೈತರು ಎಲ್ಲೆಲ್ಲಿ ತಾಳೆ ಬೆಳೆಯನ್ನು ಬೆಳೆಯುತ್ತಾರೋ ಅಲ್ಲಿನ ಸಂಬಂಧಪಟ್ಟ ಎಲ್ಲಾ ಶಾಸಕರನ್ನು ನನ್ನ ಕೊಠಡಿಗೆ ಕರೆಸಿ, ಅಧಿಕಾರಿಗಳನ್ನು ಸಹ ಕರೆಸಿ ಅವರೆಲ್ಲರ ಜೊತೆಯಲ್ಲಿ ಚರ್ಚೆಮಾಡಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ಡಿ.ಜಿ. ಶಾಂತನಗೌಡ : ಮಾನ್ಯ ಅಧ್ಯಕ್ಷರೆ, ಯಾರು ತಾಳೆ ಹಣ್ಣನ್ನು ಮಾರಿದ್ದಾರೋ ಅವರಿಗೆ ಇನ್ನೂ ಹಣ ಕೊಟ್ಟಿಲ್ಲ. ಓಸ್ವಾಲ್ ಕಂಪನಿಯವರು ಕಳೆದ ಒಂದು ವರ್ಷದಿಂದ ಸೆಟ್ಲಮೆಂಟ್ ಮಾಡಿಲ್ಲ. ಈ ರೀತಿಯಾಗಿ ರೈತರಿಗೆ 16 ಲಕ್ಷ ರೂಪಾಯಿಗಳು ಕಂಪನಿಯಿಂದ ಬಾಕಿ ಬರಬೇಕಾಗಿದೆ. ಅದನ್ನು ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಯಾವ ವ್ಯವಸ್ಥೆಯನ್ನು ಮಾಡುತ್ತಾರೆ? ಎಂಬ ಬಗ್ಗೆ ಹೇಳಬೇಕು. ಕಳೆದ ಒಂದು ವರ್ಷದಿಂದ ಹಣ್ಣಿನ ಪ್ರೊಕ್ಯೂರ್‌ಮೆಂಟ್ ಕೂಡ ಮಾಡಿಲ್ಲ, ಪೇಮೆಂಟ್ ಕೂಡ ಮಾಡಿಲ್ಲ. ಆ ರೈತರಿಗೆ ಬಾಕಿ ಹಣವನ್ನು ಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತಾರೆ? ಎಂಬ ಬಗ್ಗೆ ಅವರು ಹೇಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಷಯಗಳನ್ನು ಸಹ ಸರ್ಕಾರ ಅರ್ಥ ಮಾಡಿಕೊಂಡಿದೆ. ಬಾಕಿ ಹಣ ಕೊಡುವುದಕ್ಕೆ ಸರ್ಕಾರದಿಂದ ವ್ಯವಸ್ಥೆ ಮಾಡಲಾಗುವುದು.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ : ಮಾನ್ಯ ಅಧ್ಯಕ್ಷರೆ, ತಾಳೆ ಬೆಳೆ ಬೆಳೆದ ರೈತರು ಇಂದು ತಾಳ್ಮೆಯನ್ನೇ ಕಳೆದುಕೊಂಡಿದ್ದಾರೆ. ತಾಳೆ ಬೆಳೆಯನ್ನು ಕಿತ್ತ 24 ಗಂಟೆಗಳಲ್ಲಿ ಅದು ಪ್ರೋಸೆಸಿಂಗ್ ಯೂನಿಟ್‌ಗೆ ಹೋಗಬೇಕು, ಇದು ಬಹಳ ಮುಖ್ಯ ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 24 ಗಂಟೆಗಳಲ್ಲಿ ತಾಳೆ ಬೀಜ ಸಂಸ್ಕರಣ ಘಟಕಕ್ಕೆ ಹೋಗದಿದ್ದರೆ ನಂತರ ಅದು ಗೊಬ್ಬರಕ್ಕೂ ಕೂಡ ಉಪಯೋಗವಾಗವುದಿಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೇ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಎಂದು ಹೇಳಿಬಿಟ್ಟರೆ ಹೇಗೆ? ಇಂದು ತಾಳೆ ಬೆಳೆದ ರೈತರು ತಾಳ್ಮೆ ಕಳೆದುಕೊಂಡು ಸಾಯುವ ಪರಿಸ್ಥಿತಿ ಬರುತ್ತದಷ್ಟೆ!

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪಕ್ಷ ಪಂಗಡಗಳನ್ನು ಮರೆತು ಎಲ್ಲಾ ಸದಸ್ಯರು ರೈತರ ಗೋಳಿನ ಬಗ್ಗೆ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಶಿವಮೊಗ್ಗದಲ್ಲಿರುವ ಓಸ್ವಾಲ್ ಕಂಪನಿಯ ಆ ಘಟಕ ರೈತರಿಗೆ ದೊಡ್ಡ ಕಿರುಕುಳ ಪ್ರಾಯವಾಗಿದೆ. ಸರ್ಕಾರದ ಹಣ ಕೂಡ ಅದರಲ್ಲಿದೆ. ಅದುದರಿಂದ, ಓಸ್ವಾಲ್ ಕಂಪನಿಯವರ ಕೈಯಿಂದ ಆ ಘಟಕವನ್ನು ಕಿತ್ತುಕೊಂಡು ಸರ್ಕಾರವೇ ಅದನ್ನು ನಡೆಸುವುದಕ್ಕೆ ಯೋಜನೆಯನ್ನು ಹಾಕಿಕೊಳ್ಳುತ್ತದೆಯೇ? ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಮತ್ತು ರೈತರ

ಸಮಸ್ಯೆಗಳ ಬಗ್ಗೆ ನನಗೆ ಅರ್ಥವಾಗಿದೆ. ಓಸ್ವಾಲ್ ಕಂಪನಿಯ ಮಾಲೀಕ ಓಸ್ವಾಲ್ ಪಂಜಾಬ್‌ನಲ್ಲಿ ಎಲ್ಲೋ ಒಂದು ಕಡೆ ಇದ್ದಾರೆ. ನಾವು ಸುಮಾರು 100 ಪತ್ರಗಳನ್ನು ಬರೆದಿದ್ದೇವೆ, 8 ಲೀಗಲ್ ನೋಟೀಸ್‌ಗಳನ್ನು ಸಹ ಕಳುಹಿಸಿದ್ದೇವೆ, ಪೋಲೀಸ್ ಮೂಲಕ ರಿಜಿಸ್ಟರ್ಡ್ ಪೋಸ್ಟನ್ನು ಕೂಡ ಕಳುಹಿಸಿದ್ದೇವೆ, ಇಷ್ಟೆಲ್ಲಾ ಆದರೂ ಆತ ಸಿಗುತ್ತಿಲ್ಲ. ಆತನದ್ದೇ 51 ಪರ್ಸೆಂಟ್ ಷೇರ್ ಇರುವುದರಿಂದ ಆತನನ್ನು ಕಿತ್ತು ಹಾಕಬೇಕಾದರೆ ಬೋರ್ಡ್ ರೆಸೆಲ್ಯೂಷನ್ ಆಗಬೇಕಾಗುತ್ತದೆ. ಆದಕಾರಣ ಇದರಲ್ಲಿ ಟೆಕ್ನಿಕಲ್ ಅಂಡ್ ಲೀಗಲ್ ಪ್ರಾಬ್ಲಮ್ಸ್ ಇರುವುದರಿಂದ, ಆ ಕಾರ್ಖಾನೆಯನ್ನು ನಡೆಸುವುದಕ್ಕೆ ಸಾಧ್ಯ ಆಗುವುದಿಲ್ಲವಾದ್ದರಿಂದ ನಾವು ಸಿಂಹಪುರಿ ಎನ್ನುವ ಒಬ್ಬ ಆಂಧ್ರ ಎಂಟರ್‌ಪ್ರೀನ್ಯೂರ್‌ಯವರನ್ನು ಕರೆದುಕೊಂಡು ಬಂದು ಹಣ್ಣುಗಳನ್ನು ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕೆ ಈಗಾಗಲೇ ಸರ್ಕಾರ ವ್ಯವಸ್ಥೆ ಮಾಡಿದೆ. ಇವೊತ್ತಿನವರೆಗೂ ಕೂಡ ಆ ಭಾಗದ ರೈತರನ್ನು, ಶಾಸಕರನ್ನು ನಾನು ಕಾಣುತ್ತಲಿದ್ದೇನೆ. ಹಣ್ಣುಗಳ ಪ್ರೊಕ್ಯೂರ್‌ಮೆಂಟ್‌ನಲ್ಲಿ ಯಾವ ಸಮಸ್ಯೆ ಕೂಡ ಇರುವುದಿಲ್ಲ. ಒಂದು ವೇಳೆ ಇದ್ದರೂ ಸಣ್ಣಪುಟ್ಟವುಗಳಿರಬಹುದು. ಅಂಥ ಸಮಸ್ಯೆಗಳನ್ನು ಕೂಡ ಪರಿಹರಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಇಂದು ಓಸ್ವಾಲ್ ಕಂಪನಿಯನ್ನು ಪ್ರಾರಂಭಿಸಬೇಕೋ ಬೇಡವೋ ಎಂಬ ಬಗ್ಗೆ ಲೀಗಲ್ ಸಮಸ್ಯೆ ಏನಿದೆ ಅದರ ಬದಲು ಹೊಸ ಕಾರ್ಖಾನೆ ತೆಗೆಯಲು ಒಂದಿಬ್ಬರು ಎಂಟರ್‌ಪ್ರೀನರಿಗಳು ಮುಂದೆ ಬಂದಿದ್ದಾರೆ, ಅವರು ಹರಿಹರ, ದಾವಣಗೆರೆ ಮತ್ತು ಶಿವಮೊಗ್ಗ ಸಮೀಪ ಕಾರ್ಖಾನೆ ತೆರೆಯುತ್ತೇವೆಂದು ಹೇಳಿದ್ದಾರೆ. ಅವರಿಗೆ ಸರ್ಕಾರದಿಂದ ಎಲ್ಲಾ ಬೆಂಬಲವನ್ನು ಕೊಟ್ಟು ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಸಿದ್ಧವಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸ ಬಸ್ಸುಗಳ ಖರೀದಿ

427 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಪ್ರತಿದಿನ ಓಡುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು?*

ಆ) *ಈ ಬಸ್‌ಗಳಲ್ಲಿ ಪ್ರತಿದಿನ ಸಂಚರಿಸುವ ಪ್ರಯಾಣಿಕರ ಸರಾಸರಿ ಸಂಖ್ಯೆ ಎಷ್ಟು?*

ಇ) *2000-2001ನೇ ಸಾಲಿನಲ್ಲಿ ಹೊಸದಾಗಿ ಖರೀದಿಸಲಿರುವ ಹೊಸ ಬಸ್‌ಗಳ ಸಂಖ್ಯೆ ಎಷ್ಟು?*

ಈ) *ಇವುಗಳಿಗೆ ತಗಲುವ ವೆಚ್ಚವೆಷ್ಟು?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ (ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿದಂತೆ) ಪ್ರತಿದಿನ 11060 ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ.